ಓ ಎಸ್ ಃ**84/2013** ಪಿ. ಡಬ್ಲ್ಯೂ-**3**

ಸಾಕ್ಷಿಯನ್ನು ದಿಃ **09.12.2019** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ ಎಂ ಎನ್ ವಕೀಲರಿಂದಃ

ನನಗೆ ಈಗ ವಯಸ್ಸು **64** ವರ್ಷ, ನಾನು ಹುಟ್ಟಿದ್ದು ತುರಗನೂರು, ಬೆಳದದ್ದು ನೇರಳೆ ಗ್ರಾಮದಲ್ಲಿ. ಈ ದಾವೆಯ ಆಸ್ತಿ ಮನೆಯನ್ನು ನಾನು ನೋಡಿದ್ದೇನೆ. ದಾವಾ ಆಸ್ತಿ ಪೂರ್ವಕ್ಕೆ ಅಂಗಳ ಬರುತ್ತದೆ. ಪಶ್ಚಿಮಕ್ಕೆ ಜೋಗಯ್ಯನ ಮನೆ ಮತ್ತು ರಾಮಮಂದಿರ, ಉತ್ತರಕ್ಕೆ ದೇವಸ್ಥಾನ ಮತ್ತು ತಿರುಗಾಡುವ ಜಾಗ, ದಕ್ಷಿಣಕ್ಕೆ ಕುಳ್ಳಪ್ಪನವರ ಮನೆ. ದಾವಾ ಆಸ್ತಿ ಹಳೆಯ ನಾಡ ಹೆಂಚಿನ ಮನೆ. ನೂರಾರು ವರ್ಷಗಳ ಹಿಂದೆ ಆಗಿರುವ ಹಳೆ ಮನೆ ಎಂದರೆ ಸರಿ. ಈ ದಾವೆಯಲ್ಲಿ ಸಾವಿತ್ರಮ್ಮ ಬೋರೆಗೌಡರ ವಿರುದ್ದ ಮನೆ ಅವರದು ಬಾಡಿಗೆಗೆ ಕೊಟ್ಟಿದ್ದು ಅದಕ್ಕಾಗಿ ಹಾಕಿರುತ್ತಾರೆ. ಈ ದಾವಾ ಆಸ್ತಿಯ ಮನೆಯನ್ನು **2003** ರಲ್ಲಿ ಬಾಡಿಗೆಗೆ ಕೊಟ್ಟಿರುತ್ತಾರೆ. ಸದರಿ ಬಾಡಿಗೆ ವಿಚಾರ ಬರವಣಿಗೆ ಆಗಿರುವುದಿಲ್ಲ. ಆ ಸಂಬಂಧ ನೇರಳೇ ಗ್ರಾಮದಲ್ಲಿ ಮಾತುಕತೆ ಆಗಿರುತ್ತದೆ. **3000** ರೂ ಅಡ್ವಾನ್ಸ್ ಮತ್ತು ಬಾಡಿಗೆ ರೂ. **500** ಎಂದು ನಿಗಧಿಯಾಗಿರುತ್ತದೆ. ಆ ಸಂದರ್ಭದಲ್ಲಿ ಯಾರೆಲ್ಲ ಹಾಜರಿದ್ದರು ಎಂದು ಹೇಳಲು ಆಗುವುದಿಲ್ಲ. ಸದರಿ ಮಾತುಕತೆ ಹೊರತುಪಡಿಸಿ ಬೇರೆ ಯಾವ ಸಂದರ್ಭದಲ್ಲಿ ಆಗಿರುವುದಿಲ್ಲ. ನಾನು ಒಂದು ಬಾರಿ ಸಾವಿತ್ರಮ್ಮನ ಜೊತೆ ದಾವಾ ಆಸ್ತಿಗೆ ಹೋಗಿ ಮನೆಯನ್ನು ಖಾಲಿ ಮಾಡಲು ಪ್ರತಿವಾದಿಗೆ ಹೇಳಿರುತ್ತೇನೆ. ಸುಮಾರು **5/6** ವರ್ಷಗಳ ಹಿಂದೆ ಹೋಗಿ ಕೇಳಿರುತ್ತೇನೆ. ಪ್ರತಿವಾದಿ ದಾವಾ ಆಸ್ತಿ ಮನೆಯಲ್ಲಿ ಹುಟ್ಟಿ ಬೆಳೆದಿರುವುದು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಯ ತಂದೆ ಮತ್ತು ತಾಯಿ ವಾಸವಾಗಿದ್ದು ತದನಂತರ ಪ್ರತಿವಾದಿ ಸದರಿ ಮನೆಯಲ್ಲಿ ವಾಸವಿದ್ದಾರೆಂದರೆ ಸರಿ. ದಾವಾ ಆಸ್ತಿಯ ಮನೆಯು ಸುಮಾರು **50** ವರ್ಷಗಳಿಂದ ನೋಡುತ್ತಿದ್ದೇನೆ. ಆ ಸಂದರ್ಭದಲ್ಲಿ ಪ್ರತಿವಾದಿಯ ತಂದೆ ತಾಯಂದಿರನ್ನು ನೋಡಿರುತ್ತೇನೆ. ಪಟೇಲ್ ತಿಮ್ಮೆಗೌಡರ ಮಕ್ಕಳು ಎಲ್ಲರೂ ದಾವಾ ಆಸ್ತಿಯ ಮನೆಯಲ್ಲಿ ಹುಟ್ಟಿ ಬೆಳೆದಿರುತ್ತಾರೆಂದರೆ ಸರಿ. ಪ್ರತಿವಾದಿಯನ್ನು ಸುಮಾರು **30** ವರ್ಷದಿಂದ ನೋಡುತ್ತಿದ್ದೇನೆ. ಆವಾಗಿನಿಂದಲೂ ಪ್ರತಿವಾದಿ ದಾವಾ ಆಸ್ತಿ ಮನೆಯಲ್ಲಿ ವಾಸವಿದ್ದರು. ಹುಣಸಗಳ್ಳಿ ಗ್ರಾಮದ ಎಮ್ಮೆ ಜೋಗಿ ದಾಸೇಗೌಡ ಅವರು ನನಗೆ ಪರಿಚಯಸ್ಥರು. ಸದರಿಯವರಿಗೆ ಸಿದ್ದಮ್ಮ ಎಂಬ ಒಬ್ಬಳೇ ಮಗಳು ಎಂದರೆ ನನಗೆ ಗೊತ್ತಿಲ್ಲ. ಪಟೇಲ್ ತಿಮ್ಮೆಗೌಡರ ಮೊದಲ ಹೆಂಡತಿಯ ಹೆಸರು ಸಿದ್ದಮ್ಮ ಎಂದರೆ ಸರಿ. ಸದರಿ ಸಿದ್ದಮ್ಮರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಸದರಿ ದಾಸೇಗೌಡರು ಮಂಚಮ್ಮ ಎಂಬುವರನ್ನು ಎರಡನೇ ಮದುವೆ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಮಂಚಮ್ಮರವರಿಗೆ ಒಟ್ಟು **7** ಜನ ಮಕ್ಕಳು ಎಂದರೆ ಸರಿ. ಅವರಲ್ಲಿ ಪ್ರತಿವಾದಿ ಒಬ್ಬ ಮಗ ಎಂದರೆ ಸರಿ. ದಾವಾ ಸ್ವತ್ತು ಎಮ್ಮೆ ಜೋಗಿ ದಾಸೇಗೌಡರ ಪೂರ್ವಜರ ಆಸ್ತಿ ಎಂದರೆಸರಿ. ಈ ದಾವೆಯ ವಾದಿಗೆ **3** ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. **2003** ರಲ್ಲಿ ಬಾಡಿಗೆ ಸಂಬಂಧವಾಗಿ ಯಾವುದೇ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ **500** ರೂ ಬಾಡಿಗೆ ನೀಡಬೇಕೆಂದು ಯಾವುದೇ ತೀರ್ಮಾನ ಆಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ವಾದಿ ಪ್ರತಿವಾದಿಗೆ ಬಾಡಿಗೆದಾರ ಮಾಲೀಕ ಸಂಬಂಧ ಇಲ್ಲ ಎಂದರೆಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ